ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,

ಮಹದೇವಪುರ ವಲಯ, ಬೆಂಗಳೂರು – 560 113.

ಸಂ/ಸ.ಅ/ರಾ.ಮೂ.ನ/ಪಿ.ಆರ್/ /2021–22 ದಿನಾಂಕ:– 22/12/2021

## "ಸಭಾ ಸೂಚನಾ ಪತ್ರ"

ವಿಷಯ:– ವಾರ್ಡ್ ನಂ–51 ರ ವಿಜಿನಾಪುರ ವಾರ್ಡ್ ಕಮಿಟಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:– 24/12/2021 ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ಸಭೆ ಕರೆದಿರುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಿನಾಪುರ ವಾರ್ಡ್ ನಂ–51 ರ ಕಾರ್ಯದರ್ಶಿ ಮತ್ತು ಸಂಚಾಲಕರು ರವರ ಸಮ್ಮುಖದಲ್ಲಿ ವಾರ್ಡ್ ನಂ–51 ಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ವಿಜಿನಾಪುರ ವಾರ್ಡ್ ಕಛೇರಿಯಲ್ಲಿ ಸಭೆ ಕರೆಯಲಾಗಿದ್ದು, ತಾವುಗಳು ಮೇಲ್ಕಂಡ ದಿನಾಂಕದಂದು ತಪ್ಪದೇ ಸಭೆಗೆ ಹಾಜರಾಗಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

ವಿಶೇಷ ಸೂಚನೆ:– Covid 19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

Office of the Police Inspector
K.R. Pura Traffic Police Station, Bangalore City
Sl. No. ...
DATE 23.12.21

Kalagati Shave

ಕಾರ್ಯದರ್ಶಿಗಳು ಮತ್ತು ಸಂಚಾಲಕರು ಹಾಗೂ
ಸಹಾಯಕ ಅಭಿಯಂತರರು ವಿಜಿನಾಪುರ ವಾರ್ಡ್
ಸಂಖ್ಯೆ–51.

ರವರಿಗೆ,

RECEIVED
Office of the Executive Engineer (Electrical)
BBMP, Mahadevapura Zone, K.R. Pura,
Bangalore - 560 036.
No.................... Date 23/12/21

ದಿನಾಂಕ 22/12/2021

ಪ್ರತಿಯನ್ನು:–

1) ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಅಭಿಯಂತರರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
3) ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ವಿಭಾಗರವರ ಘನ ಮಾಹಿತಿಗಾಗಿ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ ವಿಭಾಗ ರವರ ಘನ ಮಾಹಿತಿಗಾಗಿ.
5) ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಕೇಂದ್ರ ಕಛೇರಿ ಅನೆಕ್ಸರ್ ಕಟ್ಟಡ, ರವರ ಘನ ಮಾಹಿತಿಗಾಗಿ.
6) ಬಿ.ಡಬ್ಲ್ಯೂ.ಎಸ್.ಎಸ್.ಬಿ, ಐ.ಟಿ.ಐ ಸರ್ಕಲ್, ದೂರವಾಣಿ ನಗರ ಅಂಚೆ, ಬೆಂಗಳೂರು–16 ರವರ ಮಾಹಿತಿಗಾಗಿ.
7) ರಾಜಕಾಲುವೆ ವಿಭಾಗ ಕಛೇರಿ, ನೃಪತುಂಗ ಸರ್ಕಲ್, ಬೆಂಗಳೂರು.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಇ–10 ಉಪ–ವಿಭಾಗ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ರಾಮಮೂರ್ತಿನಗರ, ಬೆಂಗಳೂರು.
9) ಪಶುಸಂಗೋಪನೆ ಇಲಾಖೆ, ಕೃಷ್ಣರಾಜಪುರ ರವರ ಮಾಹಿತಿಗಾಗಿ.
10) ಕಛೇರಿ ಪ್ರತಿ.

Scanned with CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 24.12.2021

## ದಿನಾಂಕ-24.12.2021 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ-51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 2 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 3 | ಶ್ರೀಮತಿ.ಜಯಂತಿ (ಸದಸ್ಯರು) | ಹಾಜರು |
| 4 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 5 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 6 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |
| 7 | ಶ್ರೀ.ನಾಗರಾಜ್, ಕೆಲಸ ಪರಿವೀಕ್ಷಕರು ವಾರ್ಡ್ ನಂ.51 | ಹಾಜರು |
| 8 | ಶ್ರೀ.ಬಿ.ಕೆ.ಅಶ್ವಥ ನಾರಾಯಣ (ವಿ.ಐ) ಕೆ.ಆರ್.ಪುರ | ಹಾಜರು |
| 9 | ಶ್ರೀ.ಲಕ್ಷ್ಮಣ, ಮಾರ್ಷಲ್ | ಹಾಜರು |
| 10 | ಶ್ರೀ.ಡಿ.ವೈ.ಮೋಹನ್, ಪಶು ಸಂಗೋಪನಾ ಇಲಾಖೆ | ಹಾಜರು |
| 11 | ಶ್ರೀ.ಶಿವರಾಮನ್, ಬಿ.ಡಿ.ಎ ಲೇಔಟ್ | ಹಾಜರು |
| 12 | ಶ್ರೀ.ಸಂಜೀವಯ್ಯ (ಎ.ಎಸ್.ಐ, ಟ್ರಾಫಿಕ್) | ಹಾಜರು |
| 13 | ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) | ಹಾಜರು |
| 14 | ಶ್ರೀ.ಜಾಕೀರ್, ಅಂಬೇಡ್ಕರ್‌ನಗರ | ಹಾಜರು |

ದಿನಾಂಕ:24.12.2021 ರಂದು ಪೂರ್ವಹ್ನ: 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಮಾನ್ಯ ಅಧ್ಯಕ್ಷರು ಗೈರುಹಾಜರಾಗಿರುವ ಕಾರಣ ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು, ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀಮತಿ ಜಯಂತಿ ರವರು ಮಾತನಾಡುತ್ತಾ, ಕುವೆಂಪು ಲೇಔಟ್ ಮುಖ್ಯರಸ್ತೆಯಲ್ಲಿನ ಕಸ ಮತ್ತು ಡೆಬ್ರಿಸ್ ತೆಗೆಯಲು ಕೋರಿದ್ದು, ಹಾಗೂ ವಿಜಿನಾಪುರ ಪಾರ್ಕ್ ರಸ್ತೆಯಲ್ಲಿ ಹಳೆಯ ಕಾರುಗಳನ್ನು ಮಾರುವವರು ಪಾರ್ಕ್ ಸುತ್ತಮುತ್ತ ನಿಲುಗಡೆ ಮಾಡಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುವುದರಿಂದ ನಿಲುಗಡೆ ಮಾಡಿರುವ ವಾಹನಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಹಾಗೂ ಬೆಸ್ಕಾಂ ಇಲಾಖೆಯವರು ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿ ವಿಜಿನಾಪುರ ವಾರ್ಡ್ ಸುತ್ತ-ಮುತ್ತ ನಡೆಯುತ್ತಿದ್ದು, ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

Scanned with CamScanner

ಕ್ರಮ:–

- ಸಹಾಯಕ ಅಭಿಯಂತರರು, ವಿಜಿನಾಪುರ ರವರು ಅತೀ ಶೀಘ್ರದಲ್ಲೇ ಕುವೆಂಪು ಲೇಔಟ್ ಮುಖ್ಯರಸ್ತೆಯಲ್ಲಿನ ಕಸ ಮತ್ತು ಡೆಬ್ರಿಸ್ ತೆಗೆಯುವುದಾಗಿ ಸಭೆಯಲ್ಲಿ ತಿಳಿಸಿದರು.
- ಪಾರ್ಕ್ ಸುತ್ತ–ಮುತ್ತ ನಿಲುಗಡೆ ಮಾಡಿರುವ ವಾಹನಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲೀಸರಿಗೆ ಕ್ರಮ ವಹಿಸಲು ಸೂಚಿಸಿದರು.
- ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸುವ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

2. ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) ರವರು ಮಾತನಾಡಿ ಎಫ್.ಸಿ.ಐ ಅಂಡರ್‌ಪಾಸ್ ರಸ್ತೆಯಲ್ಲಿ ಒಳಚರಂಡಿಯ ನೀರು ರಸ್ತೆಯ ಮೇಲ್ಭೈ ಹರಿಯುತ್ತಿದ್ದು, ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದ್ದು, ಮತ್ತು ಕೆಂಪೇಗೌಡ ಅಂಡರ್‌ಪಾಸ್ ಸುತ್ತ–ಮುತ್ತ ಪ್ರದೇಶದಲ್ಲಿ ಮನೆಗಳ ಡೆಬ್ರಿಸ್‌ನ್ನು ವಾಹನಗಳಲ್ಲಿ ತಂದು ಸುರಿಯುತ್ತಿರುತ್ತಾರೆ. ಇದರ ಬಗ್ಗೆ ಕ್ರ ಕೈಗೊಳ್ಳಲು ಹಾಗೂ ಎಫ್.ಸಿ.ಐ ಅಂಡರ್‌ಪಾಸ್ ರಸ್ತೆಯಲ್ಲಿ ರಸ್ತೆ ಕಾಮಗಾರಿ ನಿರ್ವಹಿಸಲು ರಸ್ತೆಯನ್ನು ಅಗೆದಿರುತ್ತಾರೆ. ಅಗೆದ ರಸ್ತೆಯನ್ನು ಸರಿ ಮಾಡಲು ಕೋರಿರುತ್ತಾರೆ.

ಕ್ರಮ:–

- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ , ರವರಿಗೆ ಅಗತ್ಯ ಕ್ರಮ ವಹಿಸಲು ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಸಹಾಯಕ ಅಭಿಯಂತರರು, ವಿಜಿನಾಪುರ ಕೆಂಪೇಗೌಡ ಅಂಡರ್‌ಪಾಸ್ ಸುತ್ತ–ಮುತ್ತ ಪ್ರದೇಶದಲ್ಲಿ ಮನೆಗಳ ಡೆಬ್ರಿಸ್‌ನ್ನು ವಾಹನಗಳಲ್ಲಿ ತಂದು ಸುರಿಯುತ್ತಿರುತ್ತಾರೆ. ಇದನ್ನು ತೆರವುಗೊಳಿಸಿ, ಮತ್ತೊಮ್ಮೆ ಡೆಬ್ರಿಸ್ ಸುರಿಯದಂತೆ ಅಗತ್ಯ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಎಫ್.ಸಿ.ಐ ಅಂಡರ್‌ಪಾಸ್ ರಸ್ತೆಯಲ್ಲಿ ರಸ್ತೆ ಕಾಮಗಾರಿ ನಿರ್ವಹಿಸಲು ರಸ್ತೆಯನ್ನು ಅಗೆದಿರುತ್ತಾರೆ. ಅಗೆದ ರಸ್ತೆಯನ್ನು ಸರಿ ಮಾಡಲು ಸಂಬಂದಪಟ್ಟ ರಸ್ತೆ ಮೂಲಭೂತ ಸೌಕರ್ಯ ಅಧಿಕಾರಿಗಳಿಗೆ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

4. ಶ್ರೀ.ಶಿವರಾಮನ್ ರವರು ಮಾತನಾಡಿ ಬಿಡಿಎ ಲೇಔಟ್ ರಸ್ತೆಗಳಲ್ಲಿ ಕಳ್ಳತನವಾಗುತ್ತಿದ್ದು ಮತ್ತು ಅಲ್ಲಲ್ಲಿ ಕಸವನ್ನು ಸುರಿಯುತ್ತಿರುತ್ತಾರೆ. ಸಾರ್ವಜನಿಕರ ಹಿತದೃಷ್ಠಿಯಿಂದ ಸಿ.ಸಿ ಕ್ಯಾಮೆರಾ ಅಳವಡಿಸಲು ಸಭೆಯಲ್ಲಿ ಕೋರಿರುತ್ತಾರೆ.

ಕ್ರಮ:– ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ರವರಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಕಾರ್ಯದರ್ಶಿ ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kragah Hoff

ವಾರ್ಡ್ ಸಮಿತಿ ಕಾರ್ಯದರ್ಶಿಗಳು,

ವಾರ್ಡ್ ನಂ.51, ವಿಜಿನಾಪುರ

Scanned with CamScanner